SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 | ಸಂಚಿಕೆ –31 | ದಿನಾಂಕ : 12–02–2025

## ದಿನಾಂಕ: 12.02.2025 ರ ವಾರದ ಸಭೆಯ ವರದಿ

**ದಿನಾಂಕ: 12.02.2025 ರಂದು ನಮ್ಮ ವಾರದ ಸಭೆ ನಡೆಯಿತು. ಅಂದು ಮುಖ್ಯ ಅತಿಥಿಗಳಾಗಿ ನಗರದ ಖ್ಯಾತ ಲೆಕ್ಕಪರಿಶೋಧಕರಾದ, ಶಿವಮೊಗ್ಗ ನಾಗರೀಕ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ.ವಿ.ವಸಂತ ಕುಮಾರ್ ಆಗಮಿಸಿ "ಸಂಘರ್ಷ ನಿರ್ವಹಣೆ" ಕುರಿತು ಮಹತ್ವ ಪೂರ್ಣ ಹಾಗೂ ಮಾಹಿತಿಯುಳ್ಳ ಮಾತುಗಳೊಂದಿಗೆ ಆಗಮಿಸಿದ್ದ ರೋಟರಿ ಬಂಧುಗಳು ಯೋಚಿಸುವಂತೆ ಮಾಡಿದರು. ವೇದಿಕೆಯಲ್ಲಿ ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪರು ಮತ್ತು ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ವೇದಿಕೆಯಲ್ಲಿದ್ದರು.**







ಮೊದಲಿಗೆ ರೊ.ಶಾರದಾ ಗೋಪಾಲ್‌ರವರು "ಎಲ್ಲರೂ ನಿಶ್ಚಿಂತೆಯಂತೆ ನಡೆದಿಹರು" ಎಂಬ ಗೀತೆಯೊಂದಿಗೆ ಪ್ರಾರ್ಥನೆ ಮಾಡಿದರು. ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ವರದಿ ನೀಡಿದರು. ಹುಟ್ಟುಹಬ್ಬದ ಶುಭಾಶಯ ಕೋರಿದರು. ರೊ. ಸಿ.ಬಿ. ವೀರಣ್ಣನವರು ಅಂದಿನ ಮುಖ್ಯ ಅತಿಥಿ ಶ್ರೀ ವಸಂತಕುಮಾರ್‌ರವರ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು.

ಶ್ರೀ ಕೆ.ವಿ.ವಸಂತಕುಮಾರ್‌ರವರು ಸಂಘರ್ಷ ನಿರ್ವಹಣೆ ಎಂಬ ವಿಚಾರವಾಗಿ ಮಾತನಾಡುತ್ತಾ, ಭಿನ್ನಾಭಿಪ್ರಾಯಗಳನ್ನು ಬಗೆ ಹರಿಸುವುದು ಹೇಗೆ ? ಎನ್ನುತ್ತಾ ಹಲವು ವಾಸ್ತವಿಕ ಸಂಗತಿಗಳೊಂದಿಗೆ ಮಾತನಾಡಿದರು. ಈಗ ಒಂದು ಮನೆಯಲ್ಲಿ ಗಂಡ ಹೆಂಡತಿಗೆ, ತಂದೆ







ಮಗನಿಗೆ, ನಿಮಗೆ ಪಕ್ಕದ್ಮನೆಯವರೊಂದಿಗೆ, ರಾಜ್ಯ ರಾಜ್ಯಗಳಲ್ಲಿ, ಅಂತರರಾಷ್ಟ್ರೀಯವಾಗಿ ಭಿನಾಭಿಪ್ರಾಯಗಳುಂಟಾಗುತ್ತವೆ. ರಾಜಕೀಯವಾಗಿ ಕೆಲವೊಮ್ಮೆ ನಮ್ಮ ಮಾಧ್ಯಮಗಳಲ್ಲಿ ಅದಕ್ಕೆ ಹೆಚ್ಚಿನ ಒತ್ತುಕೊಡಲಾಗುತ್ತದೆ. ಆದರೆ ನಿರ್ವಹಣೆ ಹಾಗು ಅದರ ಪರಿಹಾರದ ಬಗ್ಗೆ ಉದಾಹರಿಸುತ್ತಾ – ಬರ್ಲಿನ್ ಉತ್ತರ ಮತ್ತು ದಕ್ಷಿಣದ ಮಧ್ಯೆ ಭಿನ್ನಾಭಿಪ್ರಾಯ ಬಂದು ಗೋಡೆಯನ್ನು ಕಟ್ಟಲಾಗಿತ್ತು. ಆದರೆ ಬಹು ವರ್ಷಗಳ ನಂತರ ಹೊಸ ವರ್ಷದ ಸಂದರ್ಭದಲ್ಲಿ ದಕ್ಷಿಣದವರು ಮಾತನಾಡಿಕೊಂಡು, ಊರಿನಲ್ಲಿರುವ ಕಸವನ್ನು ಸಂಗ್ರಹಿಸಿ ಉತ್ತರದವರಿಗೆ ಉಡುಗೊರೆಯಾಗಿ ಕಳಿಸಿದರು. ಆದರೆ ದಕ್ಷಿಣದವರು ಮಾತನಾಡಿಕೊಂಡು ಅವರುಗಳಿಗೆ ಸಿಹಿಯಾದ ಕೇಕ್‌ನ್ನು ಕಳುಹಿಸಿ

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ: 19–02–2025, ಬುಧವಾರ** **ಸಂಜೆ 6:45**

**Chief Guest : Aishwarya V.H.**
**Counselor, Positive Mind Clinic, Shivamogga**
**Subject:**
**STRESS MANAGEMENT**
**ಒತ್ತಡ ನಿರ್ವಹಣೆ**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ




ಇದನ್ನು ತೆಗೆದುಕೊಂಡು ಸಂಭ್ರಮಿಸಿ ಎಂದರು. ಇದರಿಂದ ಉತ್ತರದವರುಗಳಿಗೆ ಮುಜುಗರವಾಯಿತು. ಇಂಥಹ ನಿರ್ಧಾರದಿಂದ ಒಳ್ಳೆಯದು ಪ್ರಾರಂಭವಾಗುತ್ತದೆ ಎನ್ನುವುದಕ್ಕೆ ಉದಾಹರಣೆ ಎಂಬಂತೆ, ನಂತರ ಉತ್ತರ ದಕ್ಷಿಣಕ್ಕಿದ್ದ ಗೋಡೆ ತೆಗೆದು ಹಾಕಲಾಗಿ ಒಳ್ಳೆಯ ಸೌಹಾರ್ದಯುತ ವಾತಾವರಣ ನಿರ್ಮಾಣವಾಗಿದೆ ಎಂದರು.

ಒಳ್ಳೆಯ ಚಿಂತನೆಯಿಂದ ಭಿನಾಭಿಪ್ರಾಯದಲ್ಲಿ ಬದಲಾವಣೆ ಸಾಧ್ಯ ಎಂದ ಅವರು. ರಾಮಾಯಾಣದ ಉದಾಹರಣೆಯನ್ನು ತೆಗೆದುಕೊಂಡು ಮಂಥರೆ ಹೇಳಿಕೆಗೆ ಶ್ರೀರಾಮ ಕಾಡಿಗೆ ತೆರಳಿದ ಇವೆಲ್ಲಾ ಗೋಲ್ಡನ್‌ರೂಲ್. ಇಂಥಹ ಸಂದರ್ಭದಲ್ಲಿ ಭಿನ್ನಾಭಿಪ್ರಾಯಗಳು ಕಡಿಮೆಯಾಗುತ್ತದೆ. ಯಾವ ಕಾರಣಕ್ಕೆ ಸಂಘರ್ಷ ಅಥವಾ ಭಿನ್ನಾಭಿಪ್ರಾಯ ಬರಬಹುದು ಎಂಬುದನ್ನು ತಿಳಿಸಿದ ಮುಖ್ಯ ಅತಿಥಿಗಳು, * ಮೌಲ್ಯದಲ್ಲಿನ ವ್ಯತ್ಯಾಸ. ಗ್ರಹಿಕೆಗಳಿಂದಾದ ಸಮಸ್ಯೆಗಳು. (ನನ್ನ ಗಂಡ ಹೀಗೆ ಹೇಳಿದ. ಅವರು ಹಾಗೆ ಹೇಳಿದರು ಎಂಬ ಹಿನ್ನೆಲೆ) ನಮ್ಮ ಅಹಂಕಾರಕ್ಕೆ ಸಂಘರ್ಷ ಜಾಸ್ತಿಯಾಗುತ್ತದೆ. ನಮ್ಮ ಮಾತಿನ ಶೈಲಿ – ಮಾತಾಡುವ ರೀತಿಯ ಶೈಲಿ. ಬಳಸುವ ಪದಗಳು ಹಾಗೂ ಶಬ್ದಗಳು ಕಾರಣವಾಗುತ್ತದೆ. ಇದಕ್ಕೆ ಅಕ್ಬರ್ ಬೀರಬಲ್‌ರ ಕಥೆಯೊಂದನ್ನು ಅರುಹಿದ ಮುಖ್ಯ ಅತಿಥಿಗಳು ಜ್ಯೋತಿಷ್ಯಯೊಬ್ಬ ಅಕ್ಬರ್‌ನಿಗೆ ನಿಮ್ಮೆಲ್ಲಾ ಮಕ್ಕಳು ಬಂಧು ಭಾಂಧವರು ತೀರಿಹೋದ ಮೇಲೆ ತಾವು ಹೋಗುತ್ತೀರಿ ಎನ್ನುತ್ತಾನೆ. ಅದರಿಂದ ಕುಪಿತನಾದ ಅಕ್ಬರ್ ಅವನನ್ನು ಶಿಕ್ಷೆಗೊಳಪಡಿಸುತ್ತಾನೆ. ಇದನ್ನು ಕಂಡು ಬೀರ್‌ಬಲ್ ಜ್ಯೋತಿಷಿ ಹೇಳಿದುದನ್ನು ಅಕ್ಬರ್‌ನಿಗೆ ನೀವು ಧೀರ್ಘಾಯುಷಿಗಳಾಗಿದ್ದೀರಿ ಎಂದು ಹೇಳಿದಾಗ ಅಕ್ಬರ್ ಸಂತುಷ್ಟನಾಗುತ್ತಾನೆ. ಇದು ಮಾತಿನ ಶೈಲಿಯಾಗಿದೆ ಎಂದರು.

ಇನ್ನೊಬ್ಬರಿಗೆ ಗೌರವಕೊಡಬೇಕಾದಾಗ ನಾವು ಆ ಬಗ್ಗೆ ಯೋಚಿಸಬೇಕು. ಅಲ್ಲದೇ ಇನ್ನೊಬ್ಬರೊಂದಿಗೆ ನಾವು ನಿತ್ಯ ಜಗಳವಾಡಬೇಕಾಗಿಲ್ಲ. ಇದರಿಂದ ನಮ್ಮ ವ್ಯವಹಾರ, ಸ್ನೇಹಗಳು ಹಾಳಾಗುತ್ತವೆ. ಆದ್ದರಿಂದ ನಾವುಗಳು ಬಹು ಎಚ್ಚರಿಕೆಯಿಂದ ನಮ್ಮ ನಡವಳಿಕೆಗಳನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ ಎಂದರು.

ಭಿನ್ನಾಭಿಪ್ರಾಯಗಳುಂಟಾಗಲು ಇನ್ನೂ ಹಲವಾರು ಕಾರಣಗಳಿವೆ. ವೈಯ್ಯಕ್ತಿಕ ಮೌಲ್ಯಗಳು, ಗ್ರಹಿಕೆಗಳು, ತದ್ವಿರುದ್ಧ ಗುರಿಗಳು, ಶಕ್ತಿ ಸಾಮರ್ಥ್ಯದ ಬಗೆಗಿನ ಅಹಂಕಾರ, ಮಾತಿನ ಶೈಲಿ ಮುಂತಾದುವುಗಳೆಲ್ಲವೂ ಕಾರಣವಾಗುತ್ತದೆ.

ವೈಯುಕ್ತಿಕ ಸಮಸ್ಯೆಗಳು ಅಂದರೆ (ಜಗಳಗಳು) ಇದರಿಂದ ಮನಸ್ಸಿಗೆ ನೋವಾಗುತ್ತದೆ. ಅಸಮಾಧಾನಕ್ಕೆ ಅವಕಾಶವುಂಟಾಗುತ್ತದೆ. ಏಕಾಂತತೆ ಮಾನಸಿಕ ಖಿನ್ನತೆ ಉಂಟಾಗುತ್ತದೆ. ಒತ್ತಡಕ್ಕೂ ಒಳಗಾಗಬಹುದು. ಇದರಿಂದ ನೈತಿಕತೆಯಲ್ಲಿ ಕುಸಿತವುಂಟಾಗಬಹುದು. ಜೊತೆಗೆ ನಮ್ಮ ಉತ್ಪಾದನ ಸಾಮರ್ಥ್ಯದಲ್ಲಿ ಕುಂಠಿತವಾಗಬಹುದು. ಹೀಗೆ ಸಂಘರ್ಷದಿಂದ, ಭಿನ್ನಾಭಿಪ್ರಾಯಗಳಿಂದ ಸಮಾಜದ ಸ್ವಾಸ್ಥ್ಯ ಮತ್ತು ನಮ್ಮ ನಮ್ಮಲ್ಲಿ ಹೊಂದಾಣಿಕೆ ಇಲ್ಲದೆಯೇ ಜೀವನ ಕಷ್ಟಕರವಾಗಬಹುದು ಎಂದರು.

**ಇಲ್ಲಿ ನಮಗೆ ಕಂಡು ಬರುವ 5 ಅಂಶಗಳನ್ನು ನೋಡುವುದಾದರೆ:–**

* ಹೊಂದಾಣಿಕೆ ಸ್ವಭಾವ (Accommodate) ಸಹಕಾರ ಮನೋಭಾವ ಧೃಡತೆ ಇರಬೇಕು. ಸಹಜವಾದ ಈ ದಾರಿಯಲ್ಲಿತ್ಯಾಗವಿರಬೇಕಾಗುತ್ತದೆ. ಮಕ್ಕಳಲ್ಲಿ ಪಾಲುದಾರರಲ್ಲಿ ಮನೆಗಳಲ್ಲಿ ಇವೆಲ್ಲವೂ ಅನಿವಾರ್ಯವಾಗಿದೆ.
* ತಪ್ಪಿಸಿಕೊಳ್ಳುವ ಸ್ವಭಾವ (Avoiding ) ಇಲ್ಲಿ ಸಮಸ್ಯೆಗಳಿಂದ ದೂರ ಹೋಗುವುದು. ಕಡಿಮೆ ಸಹಕಾರ ಹಾಗೂ ಧೃಢತೆಯೂ ಕೂಡ ಕಡಿಮೆ ಇರುತ್ತದೆ. ಕೆಲವೊಮ್ಮೆ ದೊಡ್ಡ ದೊಡ್ಡ ಸಮಸ್ಯೆಗಳ ಬಗ್ಗೆ ಗಮನ ಹರಿಸಬಹುದು. ಕೆಲವೊಂದನ್ನು ತಪ್ಪಿಸಿಕೊಂಡರೆ ಬೇರೆ ಲಾಭಗಳುಂಟು. ಇಬ್ಬರ ಜಗಳ ಮೂರನೆಯವನಿಗೆ ಲಾಭವಾಗುವುದನ್ನು ಕಡಿಮೆ ಮಾಡಬಹುದು.
* ಸಹಯೋಗ (Collaborate ) ಇಲ್ಲಿ ಸಹಕಾರವಿರುತ್ತೆ. ಧೃಢತೆ ಇರುತ್ತದೆ. ಗೌರವಯುತವಾಗಿ ಸಮಸ್ಯೆ ಬಗೆ ಹರಿಯುತ್ತದೆ. ಇಬ್ಬರಿಗೂ ಸಮಯ ಸಿಗುತ್ತದೆ. ಎಲ್ಲರೂ ಸಮಾನರಾಗುತ್ತಾರೆ.
* ಸ್ಪರ್ಧೆಗೆ ಇಳಿಯುವುದು (Competition ) . ಆರೋಗ್ಯಕರ ಸ್ಪರ್ಧೆ ಒಳ್ಳೆಯದು.
* ರಾಜಿ ಮಾಡಿಕೊಳ್ಳುವುದು (Compromise) ರಾಜಿ ಮಾಡಿಕೊಳ್ಳುವುದು ಮುಖ್ಯ ಅಂಶವಾಗುತ್ತದೆ ಕೂತು ಚರ್ಚೆ ಮಾಡುವುದು ಒಳ್ಳೆಯದು.

ಹೀಗೆ ಭಿನ್ನಾಭಿಪ್ರಾಯಗಳನ್ನು ಕಡಿಮೆ ಮಾಡಿಕೊಳ್ಳುವುದು ಒಳಿತು ಎಂದರು.

ಸದಸ್ಯರ ಪ್ರಶ್ನೆಗಳಿಗೆ ವಿವರಣೆ ನೀಡಿದ ಮುಖ್ಯ ಅತಿಥಿಗಳು ಇದಕ್ಕೆಲ್ಲಾ ಪರಿಹಾರೋಪಾಯವನ್ನೂ ಸಹ ಉದಾಹರಣೆಯೊಂದಿಗೆ ನೀಡಿದರು.

* ನಮ್ಮ ಮಾತಿನ ಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳುವುದು.
* ನಮ್ಮಗಳ ಸಾಮರ್ಥ್ಯ ಹೆಚ್ಚಿಸಿಕೊಳ್ಳುವುದು
* ಸಮಸ್ಯೆಗಳ ವಿಶ್ಲೇಷಣೆ ಮಾಡಿಕೊಳ್ಳುವುದು
* ಪದೇ ಪದೇ ಸಮಸ್ಯೆಯಾಗುತ್ತಿದೆ ಎಂದರೆ ಪರಿಹಾರ ಸೂಚನೆ
* ಇನ್ನೊಬ್ಬರಿಗೆ ಗೌರವ ನೀಡುವುದು

ಹೀಗೆ ಹಲವಾರು ಸಂಗತಿಗಳನ್ನು ಉದಾಹರಣೆಗಳೊಂದಿಗೆ ನಮ್ಮೊಂದಿಗೆ ಹಂಚಿಕೊಂಡರು.



ರೊ.ಕೆ. ಸೂರ್ಯನಾರಾಯಣ ಉಡುಪರು ಮಾತನಾಡಿ, ಮುಖ್ಯ ಅತಿಥಿಗಳು ಸಮಸ್ಯೆಗಳು ಹೇಗೆ ಬರುತ್ತದೆ. ಅದಕ್ಕೆ ಕಾರಣಗಳೇನು ? ಸಮಸ್ಯೆಗಳು ಬಂದಾಗ ಅದನ್ನು ಪರಿಹರಿಸುವ ವಿಧಾನದ ಬಗ್ಗೆ ಇಂದು ವಿವರವಾಗಿ ಮಾತನಾಡಿದ್ದಾರೆ ಅವರಿಗೆ ಧನ್ಯವಾದಗಳು ಎಂದರು. ಮುಖ್ಯ ಅತಿಥಿಗಳಾದ ಶ್ರೀ ಕೆ.ವಿ.ವಸಂತಕುಮಾರ್‌ರವರಿಗೆ ರೊ.ಪಿಡಿಜಿ. ಡಾ.ಆರ್.ಡಿ. ಪ್ರಭು ಮತ್ತು ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಡಿ.ಎಸ್. ನಟರಾಜ್‌ರವರು ಶಾಲು ಹೊದಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಕಾರ್ಯದರ್ಶಿ ರೊ.ಎನ್.ಜಿ.ಉಷಾರವರು ಸರ್ವರನ್ನು ವಂದಿಸಿದರು. ರಾಷ್ಟ್ರಗೀತೆಯ ನಂತರ ಸಭೆ ಮುಕ್ತಾಯವಾಯಿತು.











ದಿನಾಂಕ: 08–02–2025 ರಂದು ಶರಾವತಿ ನಗರದಲ್ಲಿ ನಮ್ಮ ರೋಟರಿ ಕ್ಲಬ್ ಹಾಗೂ ಹೊಯ್ಸಳ ಮಹಿಳಾ ಸಂಘ ಮತ್ತು ಸೀನಿಯರ್ ಚೇಂಬರ್ ಸಹಯೋಗದಲ್ಲಿ ಉಚಿತ ಮೊಮೊಗ್ರಫಿ ತಪಾಸಣೆ ಶಿಬಿರ ಏರ್ಪಡಿಸಲಾಗಿತ್ತು.




## WHAT IS ROTARY?

"Rotary is an international organization of business and professional people who are united world-wide to provide humanitarian services, encourage high ethical standards in all vocations and help build goodwill and peace. Rotary International is one of the largest service organizations in the world. Its motto is 'Service above Self'.

Rotary comprises Rotary Clubs, Rotary International and The Rotary Foundation. Together, Rotarians work to make lasting changes in their communities and around the world .

Rotary members are dedicated people who share a passion for community service and friendship. During Rotary Club programs, Rotary members share their thoughts about problems faced by the community, discuss ideas and bring a positive change in the community and also catch up with friends and family.

Membership in Rotary helps one to develop qualities of leadership, public speaking , business, personal and vocational skills as well as to improve cultural awareness."

## Rotary Information
## DISTRICT PROJECTS 2024-25

1. Awareness of Arogya Swatchatha
2. Awareness of Education & Law
3. Awareness of Green & Water
4. Awareness of Rasthe Sanchara Safety



## ಸಂಪಾದಕೀಯ

### ನೀನು ಅನಿವಾರ್ಯವಲ್ಲ...!

ಆಕೆ ಒಂದು ದೊಡ್ಡ ಕಂಪನಿಯಲ್ಲಿ ದೊಡ್ಡ ಜವಾಬ್ದಾರಿ ಸ್ಥಾನದಲ್ಲಿದ್ದಳು. ಭಾರಿ ಸಂಬಳ ಕೋಟಿಗಳಲ್ಲಿತ್ತು. ಅವಳ ಸಾಮರ್ಥ್ಯ ಕೂಡ ಹಾಗೇ ಇತ್ತು. ಅಷ್ಟಲ್ಲದೆ ಅಷ್ಟೊಂದು ಸಂಬಳ ಯಾರು ಕೊಡುತ್ತಾರೆ ಅಲ್ಲವೇ?

ಅದೊಂದು ದಿನ ಆಕೆ ಆ ಕಂಪನೆಯ ಸಿ.ಇ.ಓ. ಅನ್ನು ಭೇಟಿಯಾಗಿ ತಾನು ಕಂಪನಿಯ ಹುದ್ದೆಗೆ ರಾಜೀನಾಮೆ ಕೊಡಲು ಇಚ್ಛಿಸುತ್ತೇನೆ ಎಂದು ಹೇಳಿ ರಾಜೀನಾಮೆ ಪತ್ರವನ್ನು ಸಿ.ಇ.ಓ ಮೇಜಿನ ಮೇಲಿಟ್ಟಳು. ಸಿ.ಇ.ಓ. ಕೇಳಿದ: 'ನೀನು ಇಷ್ಟು ಒಳ್ಳೆಯ ಹುದ್ದೆ, ಸಂಬಳ ಇರುವ ಕೆಲಸಕ್ಕೆ ರಾಜೀನಾಮೆ ಕೊಡುತ್ತಿರುವುದೇಕೆ?' ಆಕೆ, 'ಸಾರಿ, ಅದನ್ನು ನಾನು ನಿಮಗೆ ಹೇಳಬೇಕಾಗಿಲ್ಲ. ನನ್ನ ರಾಜೀನಾಮೆ ಸ್ವೀಕರಿಸಿ' ಎಂದಳು.

'ಆಗಲಿ,ನಿನಗೆ ನಾನು ಒಂದು ಸೌಜನ್ಯದ ಆಫರ್ ಕೊಡುತ್ತೇನೆ. ಅದೇನೆಂದರೆ, ಇನ್ನೊಂದು ತಿಂಗಳು ನಮ್ಮ ಕಂಪನಿಯ ಖರ್ಚಿನಲ್ಲಿ ನೀನು ವರ್ಲ್ಡ್ ಟೂರು ಮಾಡಿಕೊಂಡು ಬಾ, ನಿನಗೆ ತೃಪ್ತಿಯಾಗುವಷ್ಟು ಹಣ ಖರ್ಚು ಮಾಡು. ಅದೆಲ್ಲವನ್ನೂ ಕಂಪನಿಯೇ ನೋಡಿಕೊಳ್ಳುತ್ತದೆ. ನೀನು ಬಂದ ಮೇಲೆಯೂ ನಿನಗೆ ರಾಜಿನಾಮೆ ಕೊಡಬೇಕು ಅನ್ನಿಸಿದರೆ ಕೊಡು. ನಾನು ಸ್ವೀಕರಿಸುತ್ತೇನೆ' ಎಂದು ಸಿ.ಇ.ಓ. ಮರು ನುಡಿದ. ಇದು ವಿಚಿತ್ರ ಅನ್ನಿಸಿತು ಆಕೆಗೆ. ಆದರೂ ಒಪ್ಪಿಕೊಂಡಳು.


ತಿಂಗಳು ಕಳೆದ ಮೇಲೆ ಆಕೆ ವರ್ಲ್ಡ್ ಟೂರ್ ಮುಗಿಸಿ ವಾಪಸಾದಳು. ಬಂದವಳೇ ಮತ್ತೆ ಸಿ.ಇ.ಓ. ಅನ್ನು ಭೇಟಿಯಾದಳು.

ಸಿ.ಇ.ಓ. ಕೇಳಿದ 'ಈಗಲೂ ನಿನಗೆ ರಾಜೀನಾಮೆ ಕೊಡಬೇಕು ಅನ್ನಿಸುತ್ತಿದೆಯಾ? ಆಕೆ 'ಶೂರ್ ನನ್ನ ನಿರ್ಧಾರದಲ್ಲಿ ಬದಲಾವಣೆಯಿಲ್ಲ. ನನ್ನ ರಾಜೀನಾಮೆಯನ್ನು ಸ್ವೀಕರಿಸಿ ಎಂದಳು. ಸಿ.ಇ.ಓ. 'ಆಗಲಿ ನಿನ್ನ ರಾಜೀನಾಮೆಯನ್ನು ಸ್ವೀಕರಿಸಿದ್ದೇನೆ. ನೀನಿನ್ನು ಹೋಗಬಹುದು. ಆಲ್ ದ ಬೆಸ್ಟ್ ಎಂದನು. ಆಕೆ ಈಗ ಕೇಳಿದಳು, 'ಅದು ಸರಿ. ಆದರೆ ಈ ಕೆಲಸವನ್ನು ಒಂದು ತಿಂಗಳ ಮೊದಲೇ ಮಾಡಬಹುದಿತ್ತಲ್ಲ? ಅದಕ್ಕೆ ನನಗಾಗಿ ಇಷ್ಟು ಖರ್ಚು ಮಾಡುವುದು ತಪ್ಪುತ್ತಿತ್ತಲ್ಲ?

ಆಗ ಸಿ.ಇ.ಓ. ಹೇಳಿದರು, 'ಸಾರಿ, ಅದನ್ನು ನಾನು ನಿನಗೆ ಹೇಳಬೇಕಾಗಿಲ್ಲ. ಆದರೂ ಹೇಳುತ್ತೇನೆ ಕೇಳು. ಈ ಒಂದು ತಿಂಗಳು ನೀನಿಲ್ಲದೆಯೂ ನಮ್ಮ ಕಂಪನಿಯ ಕೆಲಸ ಸುಸೂತ್ರವಾಗಿ ನಡೆಯುತ್ತದೆಯೇ ಅಂತ ನೋಡಿದೆ. ನಿನ್ನ ಟೀಮಿನ ಮಂದಿಯನ್ನು ಹುರಿದುಂಬಿಸಿದೆ. ಅವರೆಲ್ಲಾ ಅದ್ಭುತವಾಗಿ ಆ ಕೆಲಸವನ್ನು ನಿಭಾಯಿಸಿದರು. ಹಾಗಾಗಿ ನೀನು ನನ್ನ ಕಂಪನಿಗೆ ಅನಿವಾರ್ಯವಲ್ಲ. ನೀನು ಅನಿವಾರ್ಯವಾಗಿದ್ದರೆ ನಿನ್ನ ಸಂಬಳವನ್ನು ಎರಡು ಪಟ್ಟು ಏರಿಸಿ ನಿನ್ನ ಮನವೊಲಿಸುತ್ತಿದ್ದೆ. ಗೊತ್ತಾಯಿತಲ್ಲ. ಇನ್ನು ನೀನು ಹೊರಡಬಹುದು.

ಸಿ.ಇ.ಓ. ಮಾತಿನ ಅರ್ಥವನ್ನು ಇನ್ನೂ ಬಿಡಿಸಿ ಹೇಳಬೇಕೇ? ಇನ್ನು ಮುಂದೆ ನಮ್ಮ ಕಂಪನಿಗೆ, ಕಚೇರಿಗೆ, ಕಾರ್ಖಾನೆಗೆ, ಇಲಾಖೆಗೆ ನಾವು ಅನಿವಾರ್ಯ ಅನ್ನಿಸುವಂಥ ಪ್ರತಿಭೆ, ಜ್ಞಾನ, ಶ್ರದ್ಧೆ, ಚಾತುರ್ಯ ಬೆಳೆಸಿಕೊಳ್ಳದಿದ್ದರೆ ನಮಗೆ ಉಳಿಗಾಲವಿಲ್ಲ.

• ರೊ. ಎಂ. ಮಾಧವಾಚಾರ್







### ಚಿಂತನ

ಸಮಯವಿದ್ದಾಗ ಭೇಟಿಯಾಗುವುದು
ಮಾತನಾಡುವುದು ವ್ಯವಹಾರ.
ಸಮಯ ಮಾಡಿಕೊಂಡು ಭೇಟಿಯಾಗುವುದು
ಮಾತನಾಡಿಸುವುದು ಮಮಕಾರ.
ಖುಷಿ ಹಂಚಲು ಸಮಯ ಉಳಿಸಿಕೊಂಡರೆ
ಜೀವನವೇ ಸುಂದರ.

– ರೊ. ಕೆ. ಸೂರ್ಯನಾರಾಯಣ ಉಡುಪ

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495